ಓ.ಎಸ್. ನಂ.276/2012
ಡಿ.ಡಬ್ಲ್ಯು. : 1

ಸಾಕ್ಷಿಗೆ ಇಂದು ದಿನಾಂಕ 07-06-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲು ಶ್ರೀ ಎಂ.ಆರ್.ಐ., ವಾದಿ ಪರ ವಕೀಲರಿಂದ.**

1) ನನಗೆ ಪ್ರತಿವಾದಿಯು ಆತನು ಖಾದಿ ಗ್ರಾಮೋದ್ಯೋಗ ಸಂಸ್ಥೆಯ ಅಧ್ಯಕ್ಷನಾಗಿದ್ದ ಕಾರಣ ನನಗೆ ಪರಿಚಯ ಇದ್ದಾರೆ. ನಾನು ಸದರಿ ಸಂಸ್ಥೆಯಲ್ಲಿ ಸನ್ 2008 ರಿಂದ ನಗದು ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೇನೆ. ಪ್ರಸ್ತುತ ದಾವೆಯ ಬಗ್ಗೆ ನನಗೆ ಸ್ವಂತ ಮಾಹಿತಿ ಮತ್ತು ಪ್ರತಿವಾದಿಯೂ ಸಹ ಮಾಹಿತಿ ನೀಡಿರುತ್ತಾರೆ. ನಮ್ಮ ಸಂಸ್ಥೆಯ ಪೂರ್ವಕ್ಕೆ ಹಳ್ಳ ಇದೆ ಮತ್ತು ಪಶ್ಚಿಮಕ್ಕೆ ನದಾಫರವರ ಸ್ವತ್ತು ಇದೆ. ಪ್ರತಿವಾದ ಪತ್ರದ ಜೊತೆ ಲಗತ್ತಿಸಿರುವ ಕಚ್ಚಾ ನಕ್ಷೆಯಲ್ಲಿ ತೋರಿಸಿರುವ ರೀತ್ಯ ಗ್ರಾಮೋದ್ಯೋಗ ಸಂಸ್ಥೆಯ ಪೂರ್ವ ಮತ್ತು ಪಶ್ಚಿಮಕ್ಕೆ ವಾದಿಗಳ ಸ್ವತ್ತು ಇರುವುದು ಸರಿಯಾಗಿರುತ್ತದೆ.

2) ಖಾದಿ ಗ್ರಾಮೋದ್ಯೋಗ ಸಂಸ್ಥೆಯವರು 06 ಆಸ್ತಿಗಳನ್ನು ಖರೀದಿಸಿದ ಬಗ್ಗೆ ನಾನು ಖರೀದಿ ಪತ್ರ ನೋಡಿರುತ್ತೇನೆ. ಕರ್ನಾಟಕ ಗ್ರಾಮೋದ್ಯೋಗ ವಿಜಯಪುರದ ಕಾರ್ಯದರ್ಶಿಗಳ ಹೆಸರಿನಲ್ಲಿ ಕ್ರಯಪತ್ರ ಇದೆ.

3) ಖರೀದಿಸಿರುವ 06 ಆಸ್ತಿಗಳು ಗ್ರಾಮೋದ್ಯೋಗದ ಆಸ್ತಿಗಳೆಂದರೆ ಸರಿ. ದಾವಾ ಸ್ವತ್ತಿಗೂ, ಖಾದಿ ಗ್ರಾಮೋದ್ಯೋಗ ಸಂಸ್ಥೆಯ ಸ್ವತ್ತಿಗೂ ಸಂಬಂಧವಿಲ್ಲವೆಂದರೆ ಸರಿ. ಗ್ರಾಮೋದ್ಯೋಗ ಸಂಸ್ಥೆಯ ಆರೂ ಆಸ್ತಿಗಳು ಒಂದಕ್ಕೊಂದು ಲಗತ್ತು ಇವೆ. ಆರೂ ಸ್ವತ್ತುಗಳ ದಕ್ಷಿಣಕ್ಕೆ ಇಂಡಿ-ಪಂಡರಾಪುರ ರಸ್ತೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಂತರ ಬಹಳ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಪ್ರತಿವಾದ ಪತ್ರದ ಜೊತೆ ಲಗತ್ತಿಸಿರುವ ಕಚ್ಚಾ ನಕ್ಷೆಯಲ್ಲಿ ದಕ್ಷಿಣಕ್ಕೆ 06 ಗುಂಟೆ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಖಾದಿ ಗ್ರಾಮೋದ್ಯೋಗ ಸಂಸ್ಥೆಯ ವಶದಲ್ಲಿದೆ ಎಂದು ನುಡಿಯುತ್ತಾರೆ. ಖರೀದಿ ಪತ್ರದಲ್ಲಿ 06 ಗುಂಟೆ ಸ್ವತ್ತನ್ನು ಏಕೆ ನಮೂದಿಸಿಲ್ಲ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. 06 ಗುಂಟೆಯ ಜಾಗದ ದಕ್ಷಿಣಕ್ಕೆ 40X80 ಅಡಿ ಅಲಕುಂಟಿರವರಿಗೆ ಸೇರಿದೆ ಎಂದರೆ ಸರಿ. ಸದರಿಯವರ ಸ್ವತ್ತಿನ ದಕ್ಷಿಣಕ್ಕೆ 10 ಅಡಿ ಕಚ್ಚಾ ರಸ್ತೆ ಇದೆ ಎಂದರೆ ಸರಿ.

4) ಅಲಕುಂಟೆಯವರು ಅಸಲು ದಾವಾ ಸಂಖ್ಯೆ 377/2011 ರ ರೀತ್ಯ ಇಂಡಿ-ಪಂಡರಾಪುರ ರಸ್ತೆಯ ಬಳಿ ತನ್ನ ಆಸ್ತಿ ಇದೆ ಎಂದು ವಾದಿಸಿದ್ದರು ಎಂದರೆ ಸರಿ. ಗೌರವಾನ್ವಿತ ಹಿರಿಯ ಶ್ರೇಣಿ ನ್ಯಾಯಾಲಯ, ಇಂಡಿಯಲ್ಲಿ ದಾವಾ ನಡೆದು ಯಾವುದೇ ಸ್ವತ್ತು ಇಲ್ಲವೆಂದು ಆದೇಶ ಆಗಿರುವ ಸಂಗತಿ ನನಗೆ ಗೊತ್ತಿಲ್ಲ. ನ್ಯಾಯಾಲಯದ ಆದೇಶದ ರೀತ್ಯ ಇಂಡಿ-ಪಂಡರಾಪುರ ರಸ್ತೆಯ ಬಳಿ ಅಲಕುಂಟೆಯವರ ಸ್ವತ್ತು ಇಲ್ಲವೆಂದರೆ ಸಾಕ್ಷಿಯು ಆದೇಶದ ಬಗ್ಗೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಅಲಕುಂಟೆಯವರ ಜಾಗ ನಮ್ಮ ಸ್ವತ್ತಿನ ದಕ್ಷಿಣ ದಿಕ್ಕಿಗೆ ಇದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

5) ಇಂಡಿ-ಪಂಡರಾಪುರ ರಸ್ತೆಯು ಈ ಹಿಂದೆ ಒಂಟಿ ರಸ್ತೆಯಾಗಿದ್ದು, ಹಳ್ಳದಲ್ಲಿ ಹೋಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಈಗ ಸೇತುವೆ ಇದೆ ಎಂದು ನುಡಿಯುತ್ತಾರೆ. ಸೇತುವೆಯು ಸನ್ 1990 ಕ್ಕೂ ಮೊದಲು ನಿರ್ಮಾಣ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸೇತುವೆಯ ಪಕ್ಕದಲ್ಲಿ ಡಾಂಬರು ರಸ್ತೆ ಇದೆ ಎಂದರೆ ಸರಿ. ವಾದಿಯ ಮನೆಗಳ ಮುಂದೆ ಸದರಿ ರಸ್ತೆ ಇದೆ ಎಂದರೆ ಸರಿಯಲ್ಲ. ಡಾಂಬರು ರಸ್ತೆಯು ವಾದಿಗಳ ಸ್ವತ್ತಿಗೆ ಹೊಂದಿಕೊಂಡಂತಿದೆ ಎಂದರೆ ಸರಿಯಲ್ಲ.

6) ಪ್ರಸ್ತುತ ಇಂಡಿ-ಪಂಡರಾಪುರ ರಸ್ತೆಯ ಅಗಲವು ಸುಮಾರು 30 ಅಡಿ ಇರಬಹುದು. ಅದು ರಾಜ್ಯ ಹೆದ್ದಾರಿ ಎಂದರೆ ನನಗೆ ಗೊತ್ತಿಲ್ಲ. ಸರಕಾರಿ ನಿಯಮದ ಪ್ರಕಾರ ರಾಜ್ಯ ಹೆದ್ದಾರಿಗೆ ಮಧ್ಯ ಭಾಗದಿಂದ ಎರಡೂ ಕಡೆ 40 ಮೀಟರ ಬಿಡಬೇಕೆಂಬ ನಿಯಮ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಹಾಲಿ ಇಂಡಿ-ಪಂಡರಾಪುರ ರಸ್ತೆಯು 40 ಅಡಿ ಅಗಲವಿದೆ ಎಂದರೆ ನನಗೆ ಗೊತ್ತಿಲ್ಲ. ರಸ್ತೆಯ ಎರಡೂ ಬದಿಗಳಲ್ಲಿ 03 ಮೀಟರ ಜಾಗ ಸರಕಾರಕ್ಕೆ ಇದೆ ಎಂದರೆ ಗೊತ್ತಿಲ್ಲ.

7) 06 ಗುಂಟೆ ಆಸ್ತಿಯು ಇಂಡಿ-ಪಂಡರಾಪುರ ರಸ್ತೆಯ ಲಗತ್ತಾಗಿತ್ತು ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯು ರಸ್ತೆಯ 10 ಅಡಿ ದೂರದಲ್ಲಿದೆ. ಸರ್ವೆ ನಂ.504 ರಲ್ಲಿ 06 ಗುಂಟೆ ಸ್ವತ್ತು ಇರುವ ಬಗ್ಗೆ ಪಹಣಿ ಪತ್ರಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆ ಇಲ್ಲವೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕಚ್ಚಾ ನಕ್ಷೆಯು ಸಂಪೂರ್ಣ ತಪ್ಪು

ಇದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಜಾಗ ಇಲ್ಲದೇ ಇದ್ದರೂ ಸಹ ನಮ್ಮ ಜಾಗ ಎಂದು ಹೇಳಿ ವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.